

## ಶಿಕ್ಷಣಕ್ಷೇತ್ರದ ಮಹತ್ತರ ಮೈಲಿಗಲ್ಲು

# ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ

> ಶಿಕ್ಷಣವನ್ನು ಹಣಗಳಿಸುವ ಯಂತ್ರ ಮಾಡಿಕೊಂಡಿರುವ ಈ ಕಾಲದಲ್ಲಿ ಶೇಷಾದ್ರಿಪುರಂ ಶಿಕ್ಷಣ ದತ್ತಿಯು ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಲೇ ಕರ್ನಾಟಕದ ಶೈಕ್ಷಣಿಕ ರಂಗದಲ್ಲಿ ತನ್ನದೇ ಆದ ವಿಶಿಷ್ಟ ಛಾಪನ್ನು ಮೂಡಿಸಿದೆ. ಇಂತಹ ಮಹೋದ್ಧೇಶ ಹೊಂದಿರುವ ಶಿಕ್ಷಣ ದತ್ತಿಯ ಪ್ರಮುಖ ಅಂಗ ಸಂಸ್ಥೆ ಶೇಷಾದ್ರಿಪುರಂ ಕಾಲೇಜು. 1973ರಲ್ಲಿ ಅಸ್ತಿತ್ವ ಪಡೆದ ಶೇಷಾದ್ರಿಪುರಂ ಕಾಲೇಜು ನಾಡಿನಉನ್ನತ ಶಿಕ್ಷಣದಲ್ಲಿ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ.

ಶಿಕ್ಷಣವು ಕೇವಲ ಜ್ಞಾನವನ್ನು ವೃದ್ಧಿಸುವ ಸಾಧನವಾಗದೆ, ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಯ ದಾರಿದೀಪವಾಗಬೇಕು ಎಂಬುದು ಪ್ರಸ್ತುತ ಸಮಾಜದ ಬಹುದೊಡ್ಡ ನಿರೀಕ್ಷೆಯಾಗಿದೆ. ಇಂತಹ ನಿರೀಕ್ಷೆಗೆ ಮಾದರಿಯೆಂಬಂತೆ ಶೇಷಾದ್ರಿಪುರಂ ಕಾಲೇಜು ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆಯ ಸಂಗತಿ ಎಂದರೆ ಅತಿಯಶೋಕ್ತಿಯಲ್ಲ.

ಶಿಕ್ಷಣವನ್ನು ಹಣಗಳಿಸುವ ಯಂತ್ರ ಮಾಡಿಕೊಂಡಿರುವ ಈ ಕಾಲದಲ್ಲಿ ಶೇಷಾದ್ರಿಪುರಂ ಶಿಕ್ಷಣ ದತ್ತಿಯು ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಲೇ ಕರ್ನಾಟಕದ ಶೈಕ್ಷಣಿಕ ರಂಗದಲ್ಲಿ ತನ್ನದೇ ಆದ ವಿಶಿಷ್ಟ ಛಾಪನ್ನು ಮೂಡಿಸಿದೆ. ಇಂತಹ ಮಹೋದ್ಧೇಶ ಹೊಂದಿರುವ ಶಿಕ್ಷಣ ದತ್ತಿಯ ಪ್ರಮುಖ ಅಂಗ ಸಂಸ್ಥೆ ಶೇಷಾದ್ರಿಪುರಂ ಕಾಲೇಜು. 1973ರಲ್ಲಿ ಅಸ್ತಿತ್ವ ಪಡೆದ ಶೇಷಾದ್ರಿಪುರಂ ಕಾಲೇಜು ನಾಡಿನಉನ್ನತ ಶಿಕ್ಷಣದಲ್ಲಿ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ.

ಕಾಲೇಜಿನ ನಾಲ್ಕು ದಶಕಗಳ ಸುಧೀರ್ಘ ಪ್ರಯಾಣವು 35 ವಿದ್ಯಾರ್ಥಿಗಳಿಂದ ಪ್ರಾರಂಭವಾಗಿ, ಪ್ರಸ್ತುತ 2600 ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯಲ್ಲಿ ನಿರತವಾಗಿದೆ. ಪದವಿ ಹಂತದಲ್ಲಿ ಬಿ.ಕಾಂ., ಬಿ.ಬಿ.ಎ. ಹಾಗು ಬಿ.ಸಿ.ಎ. ವ್ಯಾಸಂಗಕ್ಕೆ ಅವಕಾಶವಿರುತ್ತದೆ. ಸ್ನಾತಕೋತ್ತರ ವಿಭಾಗದಲ್ಲಿ ಎಂ.ಕಾಂ., ಎಂ.ಕಾಂ.(ಫೈನಾನ್ಷಿಯಲ್ ಅನಾಲೆಸಿಸ್), ಎಂ.ಕಾಂ.(ಇಂಟರ್‌ನ್ಯಾಷನಲ್ ಬಿಜ಼ನೆಸ್) ಅಧ್ಯಯನಕ್ಕೆ ಅವಕಾಶವಿರುತ್ತದೆ. ಪದವಿ ಹಂತವು ನುರಿತ ಉಪನ್ಯಾಸಕರನ್ನು ಒಳಗೊಂಡರೆ,



'ಕಾಲೇಜಿನ ಶ್ರೇಷ್ಟತೆಯು ಕೇವಲ ಶೈಕ್ಷಣಿಕ ಹಾಗು ಔದ್ಯೋಗಿಕ ಉನ್ನತಿಮಾತ್ರವಾಗಿರದೆ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಬದ್ಧತೆಯನ್ನು ಮೂಡಿಸುವುದರಲ್ಲಿದೆ. ಸಮಾಜಕ್ಕೆ ಉತ್ತಮ ಹಾಗು ಮಾನವೀಯ ನಾಗರೀಕರನ್ನು ನೀಡುವಲ್ಲಿ ನಮ್ಮ ಸಂಸ್ಥೆಯು ನಿರಂತರವಾಗಿ ಶ್ರಮಿಸುತ್ತಿರುತ್ತದೆ' ಎಂಬ ಅಭಿಪ್ರಾಯ ಕಾಲೇಜಿನ ಪ್ರಾಂಶುಪಾಲರಾದ ಡಾ. ಅನುರಾಧ ರಾಯ್ ಅವರದು.

ಸ್ನಾತಕೋತ್ತರ ವಿಭಾಗವು ನುರಿತ ಪ್ರಾಧ್ಯಾಪಕರೊಂದಿಗೆ ಔದ್ಯೋಗಿಕ ಕ್ಷೇತ್ರದತಜ್ಞರಿಗೂ ಸಹ ಬೋಧನೆಗೆ ಅವಕಾಶ ಕಲ್ಪಿಸಿರುವುದು ಮೆಚ್ಚುಗೆಯ ಸಂಗತಿ. ಮೌಲ್ಯಯುತ ತತ್ವಗಳನ್ನಾಧರಿಸಿದ ಸಮಿತಿಗಳ ಮೂಲಕ ವಿದ್ಯಾರ್ಥಿಗಳ ಸಮಗ್ರ ಬೆಳವಣಿಗೆಗೆ ಸೂಕ್ತ ವೇದಿಕೆಯನ್ನು ಒದಗಿಸುವುದು ಕಾಲೇಜಿನ ಬಹುಮುಖ್ಯ ಪರಿಕಲ್ಪನೆಯಾಗಿದೆ. ಪಠ್ಯಕ್ಕೆ ಪ್ರೊತ್ಸಾಹಿಸುವಂತೆ ಕ್ರೀಡಾ ಹಾಗು ಸಾಂಸ್ಕೃತಿಕ ಸ್ಪರ್ಧಾವಲಯದಲ್ಲಿಯೂ ವೇದಿಕೆಗಳನ್ನು ಒದಗಿಸುತ್ತದೆ. ರಾಷ್ಟ್ರ ಹಾಗು ಅಂತರ ರಾಷ್ಟ್ರೀಯ ಮಟ್ಟದಲ್ಲಿಯೂ ವಿದ್ಯಾರ್ಥಿಗಳು ಭಾಗವಹಿಸಿ ಪ್ರಶಸ್ತಿ ಪಡೆಯುವುದರೊಂದಿಗೆ ಕಾಲೇಜಿನ ಕೀರ್ತಿಗೆ ಕಾರಣರಾಗಿದ್ದಾರೆ. ಕಾಲೇಜಿನ ಮತ್ತೊಂದು ಮಹತ್ವದ ಅಂಶವೆಂದರೆ 'ಕ್ಯಾಂಪಸ್ ನೇಮಕಾತಿ'. ವಿದ್ಯಾರ್ಥಿಗಳ ಮುಂದಿನ ವೃತ್ತಿ ಜೀವನದ ಹಾದಿ ಸುಗಮವಾಗಲು ನಿರಂತರ ತರಬೇತಿಯನ್ನು ನೀಡುವುದರೊಂದಿಗೆ ಉತ್ತಮ ಕಂಪನಿಗಳಲ್ಲಿ ಸ್ಥಾನದೊರೆಯುವಂತೆ ಮಾಡಲಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಕಂಪನಿಗಳು ಅನುಮೋದಿಸುವ ಮೌಲ್ಯಾಧಾರಿತ ವಿಶೇಷ ಕೋರ್ಸ್‌ಗಳೊಂದಿಗೆ ಪ್ರಮಾಣಪತ್ರವನ್ನು ನೀಡಲಾಗುವುದು. ಜಾಗತಿಕ ಮಟ್ಟದ ವಿದ್ಯಾಭ್ಯಾಸಕ್ಕೆ ಅನುವು ಮಾಡಿಕೊಡಲು ಯು.ಕೆ. ಹಾಗು ಯು.ಎಸ್.ಎ.ನ ವಿಶ್ವವಿದ್ಯಾಲಯಗಳ ಪಾಲುದಾರಿಕೆಯೊಂದಿಗೆ ಸ್ನಾತಕೋತ್ತರ ಪದವಿಗೂ ಅವಕಾಶವಿರುತ್ತದೆ.

ಹಲವು ದಶಕಗಳ ನಿರಂತರ ಸೇವೆಯಲ್ಲಿ ವಿದ್ಯಾಸಂಸ್ಥೆಯು ಅನೇಕ ಉನ್ನತ ಸ್ಥಾನಮಾನಗಳನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದೆ. ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಸಮಿತಿಯು (ನ್ಯಾಕ್) ಸತತವಾಗಿ 'ಎ' ಶ್ರೇಣಿಯನ್ನು ನೀಡಿ ಗೌರವಿಸಿರುತ್ತದೆ. ರಾಷ್ಟ್ರದ ಸುಪ್ರಸಿದ್ಧ ಪತ್ರಿಕೆಯಾದ ಇಂಡಿಯಾ ಟುಡೆ ತನ್ನ ನೀಲ್ಸನ್ ಸಮೀಕ್ಷೆಯನ್ನು ಪ್ರತಿವರ್ಷ ನಡೆಸುತ್ತಿದ್ದು, ಭಾರತದ ಉತ್ತಮ ನಲವತ್ತು ಕಾಲೇಜುಗಳನ್ನು ಗುರುತಿಸುವ ಪ್ರಕ್ರಿಯೆಯನ್ನು ಹೊಂದಿದೆ. ಈ ಸಮೀಕ್ಷೆಯಲ್ಲಿ ಶೇಷಾದ್ರಿಪುರಂ ಕಾಲೇಜು ವಾಣಿಜ್ಯಶಾಸ್ತ್ರ(ಕಾಮರ್ಸ್) ವಿಭಾಗದಲ್ಲಿ 19ನೇ ಶ್ರೇಯಾಂಕವನ್ನು ಪಡೆದಿರುವುದು ಕಾಲೇಜಿನ ಹಿರಿಮೆಗೆ ಹಿಡಿದ ಕೈಗನ್ನಡಿಯಾಗಿದೆ.